# ಆಹಾ ಸುದ್ದಿ!

★ ಸಸಿತೋಟ




ಇದು ಸಿನಿಮಾದ ರಂಜನೀಯ ದೃಶ್ಯವಲ್ಲ. ಅಮೆರಿಕದ ಅರಿಝೋನಾದಲ್ಲಿ ಮದುವೆಯಾಗಲು ಚರ್ಚ್‌ಗೆ ಹೊರಟ ವಧು ಆ್ಯಂಬರ್ ಎಂಬಾಕೆ ಮೂರು ಕಾರುಗಳಿಗೆ ಅಪಘಾತ ಮಾಡಿ ಪೊಲೀಸ್ ಅತಿಥಿಯಾಗಿದ್ದಾಳಂತೆ. ವಿವಾಹೋತ್ತರ ಪಾರ್ಟಿಗಾಗಿ ಇಟ್ಟ ಎಣ್ಣೆಯನ್ನು ಮೊದಲೇ ಏರಿಸಿಕೊಂಡಿದ್ದು ಇದಕ್ಕೆ ಕಾರಣವಂತೆ. ಮದುವೆಯೆಂಬ ಆಘಾತ– ಅಪಘಾತದಿಂದ ವರ ಸ್ವಲ್ಪದರಲ್ಲಿ ಬಚಾವಾಗಿರಬಹುದು.

ಗಡ್ಡ ಬಿಟ್ಟ ವರನಿಗೆ ತನ್ನ ಮಗಳನ್ನು ವಿವಾಹ ಮಾಡಿ ಕೊಡುವುದಿಲ್ಲ ಎಂದು ಹಟ ಹಿಡಿದ ವಧುವಿನ ತಂದೆ ಕೊನೆಗೂ ವರನ ಗಡ್ಡ ತೆಗೆಸಿದ ಘಟನೆ ಮಧ್ಯಪ್ರದೇಶದ ಖಾಂಡ್ವಾದಲ್ಲಿ ನಡೆದಿದೆ. ದಿಬ್ಬಣ ಬಂದ ಮೇಲೆ ಈ ಜಟಾಪಟಿ ನಡೆದಿದ್ದು, ಮಾತುಕತೆ ವೇಳೆ ಗಡ್ಡ ಇರಲಿಲ್ಲ ಎಂದು ವಧುವಿನ ತಂದೆ ವಾದಿಸಿದರೆ, ವರ ಮಂಗಲ್ ಚೌಹಾಣ್, ಗಡ್ಡ ಬಿಟ್ಟ ವಿರಾಟ್ ಕೊಹ್ಲಿ ಮದುವೆಯಾಗಲಿಲ್ಲವೇ ಎಂದು ಪ್ರತಿವಾದ ಮಂಡಿಸಿದನಂತೆ. ಜಗ್ಗಾಟ ನಡೆದು ಕೊನೆಗೆ ವಿವಾಹ ಮಂಟಪ ಪ್ರವೇಶಿಸಿದ ಪೊಲೀಸರು ವರನ ಮನವೊಲಿಸಿ ಶೇವ್ ಮಾಡಿಸಿದರಂತೆ. ಗಡ್ಡ ಮಗಳಿಗೆ ತೊಂದರೆ ಕೊಡಬಹುದು. ಆದರೆ ಆಕೆಯ ತಂದೆ ಯಾಕೆ ಹಟ ಹಿಡಿದನೋ!



ಅರಬ್ ದೇಶಗಳಲ್ಲಿ ಶುರುವಾಗಿರುವ ಹೊಸ ಮೋಜು– ಮಸ್ತಿ. ಎರಡೇ ಗಾಲಿಗಳ ಮೇಲೆ ಜೀಪ್ ಓಡಿಸುವ 'ಸೈಡ್‌ವಾಲ್ ಸ್ಕೀಯಿಂಗ್' ಎಂಬ ಥ್ರಿಲಿಂಗ್. ಸೈಡಿಗೆ ವಾಲಿಕೊಂಡು ಹೋಗೋದೇನೋ ಸರಿ, ಸೆಲ್ಫಿ ಯಾಕೆ ಸೆಂಟ್ರಲ್‌ನಲ್ಲಿ..!



ಸದ್ಯಕ್ಕೆ ಬಿಸಿಬಿಸಿ ಸುದ್ದಿಯಲ್ಲಿರುವ ಬಿಟ್‌ಕಾಯಿನ್ ಇನ್ನೊಂದು ದಾಖಲೆ ಮಾಡಿದೆ. ಇದರ ಮೊದಲ ಸ್ಮಾರಕವನ್ನು ಸ್ಲೋವೇನಿಯಾದಲ್ಲಿ ನಿರ್ಮಿಸಲಾಗಿದೆ. ಅಲ್ಲಿಯ ಕ್ರಾಂಜ್ ನಗರದ ನಿವಾಸಿಗಳ ಆಗ್ರಹದ ಮೇರೆಗೆ ಈ ಸ್ಮಾರಕ ನಿರ್ಮಿಸಲಾಗಿದೆ ಎಂಬುದು ಅಧಿಕಾರಿಗಳ ಸಮಜಾಯಿಷಿಯಂತೆ. ಎಲ್ಲಾ ಕಳಕೊಂಡ ಮೇಲೇ ಅಲ್ಲವೇ ಸ್ಮಾರಕವಾಗಿ ಕೂರೋದು!

ಪ್ರೇಯಸಿ ಪ್ರಿಯಕರನೆದುರೇ ಇನ್ನೊಬ್ಬನಿಗೆ ಚುಂಬಿಸಿದರೆ ಏನಾಗುತ್ತದೆ? ಬೈಗುಳ, ಹೊಡೆತಗಳ ವಿನಿಮಯ ನಡೆಯಬಹುದು, ಪೊಲೀಸರು ಎಂಟ್ರಿ ಕೊಡಬಹುದು. ಆದರೆ ಅರ್ಜೆಂಟೀನಾದ ಯುವಕ ಮಾರಿಯಾನೋ ಪಾರ್ಟಿಯಲ್ಲಿ ತನ್ನ ನಲ್ಲೆ ಇನ್ನೊಬ್ಬನಿಗೆ ಮುತ್ತಿಕ್ಕುತ್ತಿರುವುದನ್ನು ಕಂಡು ಕೂಲಾಗಿ ಫೋಟೊ ತೆಗೆದು ಅಷ್ಟೇ ಕೂಲಾಗಿ ಟ್ವಿಟ್ಟರ್‌ನಲ್ಲಿ ಪೋಸ್ಟ್ ಮಾಡಿದನಂತೆ. ಹೊಡೆತ, ಪೊಲೀಸರ ಕೆಲಸ ಎಲ್ಲವನ್ನೂ ಸಾಮಾಜಿಕ ಜಾಲತಾಣವೊಂದೇ ಮಾಡಿ ಮುಗಿಸುತ್ತದೆ ಅಲ್ಲವೇ!



ಈ ಭೂಮಿಯಲ್ಲೇ ಅತ್ಯಂತ ಹೆಚ್ಚು ಬಾರಿ ಹಚ್ಚೆ ಕೊಚ್ಚಿಸಿಕೊಂಡಾತ ಈ ಗ್ರೆಗರಿ ಪಾಲ್ ಎಂಬಾತ. ಹಚ್ಚೆಯ ಹುಚ್ಚಿನ ಮಿತಿ ಇನ್ನೂ ಮೀರಲು ಸಾಧ್ಯವಿಲ್ಲ ಅಲ್ಲವೇ?